2017 ಕ.ತೀ.ವ 657

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

ಶ್ರೀಮತಿ ಮೀರಾ -ವಿರುದ್ಧ- ಶ್ರೀ ನಾಗೇಶ್ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ ಕ್ರಮಾದೇಶ 43 ನಿಯಮ (1 ಯು) ಮೇರೆಗಿನ ಸಂಕೀರ್ಣ ಎರಡನೇ ಅಪೀಲು.

ಮೊದಲ ಅಪೀಲು ನ್ಯಾಯಾಲಯ ಪ್ರಶ್ನಿತ ತೀರ್ಪಿನ ಮೂಲಕ ವಿಷಯವನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಿದೆ – ಹಿಂದಿನ ಎಂಎಸ್ಎ ಯಲ್ಲಿ ವಿಷಯವನ್ನು ಹೊಸದಾಗಿ ನಿರ್ಧರಿಸಲು ಮೊದಲ ಅಪೀಲು ನ್ಯಾಯಾಲಯಕ್ಕೆ ಉಚ್ಚ ನ್ಯಾಯಾಲಯವು ನಿರ್ದೇಶಿಸಿದೆ. ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಮೊದಲ ಅಪೀಲು ನ್ಯಾಯಾಲಯವು ವಿಷಯವನ್ನು ನಿರ್ಧರಿಸಿರುವುದಿಲ್ಲ ಮತ್ತು ವಿಷಯವನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ವಾಪಸ್ಸು ಕಳಿಸಿರುತ್ತದೆ. ಮೊದಲ ಅಪೀಲು ನ್ಯಾಯಾಲಯವು ತನ್ನ ಕರ್ತವ್ಯದಿಂದ ಹಾಗೂ ಕಾನೂನಾತ್ಮಕವಾಗಿ ಹಿಂದೆ ಸರಿದಿದೆ – ಅಪೀಲು ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯಕ್ಕೆ ಪದೇ ಪದೇ ವಿಷಯವನ್ನು ವಾಪಸ್ಸು ಕಳುಹಿಸುವ ಮೂಲಕ ತನ್ನ ಜವಾಬ್ದಾರಿಯನ್ನು ಮರೆತು ಕರ್ತವ್ಯ ಚ್ಯುತಿ ಎಸಗಿದೆಯೆಂದು ಅಭಿಪ್ರಾಯಪಟ್ಟಿದೆ.

ಕೆಳ ಅಪೀಲು ನ್ಯಾಯಾಲಯ ವಿಚಾರಣಾ ನ್ಯಾಯಾಲಯಕ್ಕೆ ಮೊಕದ್ದಮೆಯ ವಿಷಯವನ್ನು ಹಿಂದಿರುಗಿಸುವ ಮೂಲಕ ತನ್ನ ಹೊಣೆಗಾರಿಕೆಯನ್ನು ಕಾರ್ಯತಃ ಪರಿತ್ಯಜಿಸಿದೆ ಎಂಬುದನ್ನು ಗಮನಿಸಲಾಗಿದೆ.

ಕೆಳ ನ್ಯಾಯಾಲಯವೇ ನ್ಯಾಯ ಹಿತಾಸಕ್ತಿಯಲ್ಲಿ ದಾವೆಯ ಮೊಕದ್ದಮೆಯನ್ನು ಪುನರ್ ವಿಚಾರಣೆಗಾಗಿ ಹಿಂದಕ್ಕೆ ಕಳುಹಿಸುವುದು ನ್ಯಾಯ ತೀರ್ಮಾನದ ವಿಳಂಬಕ್ಕೆ

*ಎಂ.ಎಸ್.ಎ. ಸಂಖ್ಯೆ: 100002/2015, ದಿನಾಂಕ: 2ನೇ ಜೂನ್, 2016.

**ಕಾರಣವಾಗಿರುತ್ತದೆ. ಎಂದರೆ ಹಿಂದಕ್ಕೆ ಕಳುಹಿಸುವುದು ಅನಗತ್ಯ ವೆಚ್ಚವಾಗಿದೆ ಮತ್ತು ಅದಕ್ಕಾಗಿ ಸಾಕಷ್ಟು ಕಾಲವು ವ್ಯಯವಾಗುತ್ತದೆ. ಬದುಕಿನ ಜೀವಾವಧಿಯನ್ನು ಮೊಕದ್ದಮೆಗಳಲ್ಲಿಯೇ ಕಳೆಯುವುದು ಉಚಿತವಾದುದಲ್ಲ. ಆದುದರಿಂದ ಹಿಂದಕ್ಕೆ ಕಳುಹಿಸುವಂತಹ ವಾರೆಂಟು ನೀಡದಿರುವುದರಿಂದ ಈ ವಿಳಂಬತೆಯನ್ನು ತಪ್ಪಿಸಬೇಕು. ಕೆಳ ನ್ಯಾಯಾಲಯ ನ್ಯೂನತಾ ಕಾರ್ಯ ವಿಧಾನವನ್ನು ಅನ್ವಯಿಸಿಕೊಂಡಿದೆ ಮತ್ತು ತನ್ನ ಕರ್ತವ್ಯವನ್ನು ತ್ಯಜಿಸಿದೆ.**

**ಇದರ ಪರಿಣಾಮವಾಗಿ, ಅಪೀಲನ್ನು ಪುರಸ್ಕರಿಸಿದೆ ಮತ್ತು ಪ್ರಶ್ನಿತ ತೀರ್ಪನ್ನು ತಳ್ಳಿ ಹಾಕಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. (2011)6 ಎಸ್‌ಸಿಸಿ 462*
*ಪ್ರೇಮ –ವಿರುದ್ಧ– ನಂಜೇಗೌಡ* *(ಉಲ್ಲೇ) 2*

ಅರ್ಜಿದಾರರ ಪರ: ಶ್ರೀ ಜಗದೀಶ್ ಪಾಟೀಲ್, ವಕೀಲರು.
1ನೇ ಪ್ರತ್ಯರ್ಜಿದಾರರ ಪರ: ಶ್ರೀ ಶ್ರೀಹರ್ಷ ಎ. ನೀಲೊಪಂತ್, ವಕೀಲರು,
2ನೇ ಪ್ರತ್ಯರ್ಜಿದಾರರ ಪರ: ಶ್ರೀ ಎಸ್.ಎಸ್. ಭಟ್, ವಕೀಲರು.
3, 4 & 5ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಲಾಗಿದೆ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

ಹಿರಿಯ ಸಿವಿಲ್ ನ್ಯಾಯಾಧೀಶರು, ಕುಮುಟಾ ಇವರು ದಿನಾಂಕ 18.08.2014ರಂದು ಆರ್.ಎ.ಸಂಖ್ಯೆ 31/2010ರಂದು ನೀಡಿದ ತೀರ್ಪು ಮತ್ತು ಆದೇಶದ ವಿರುದ್ಧ ನಿರ್ದೇಶಿಸಲು ಅಪೀಲನ್ನು ಸಲ್ಲಿಸಲಾಗಿದೆ. ಪ್ರಶ್ನಿತ ತೀರ್ಪಿನ ಮೂಲಕ ಮಾನ್ಯ ಅಪೀಲು ನ್ಯಾಯಾಧೀಶರು, ಮಧ್ಯಕಾಲೀನ ಲಾಭಗಳಿಗೆ

ಸಂಬಂಧಪಟ್ಟಂತೆ ವಿಚಾರಣೆಯನ್ನು ನಡೆಸುವುದಕ್ಕೆ, ವಸ್ತು ವಿಷಯವನ್ನು ಮತ್ತು ಪ್ರಾರಂಭಿಕ ಡಿಕ್ರಿಯ ಪ್ರಕಾರದಂತೆ ಚರಾಸ್ತಿ ಸ್ವತ್ತುಗಳ ವಿಭಜನೆಯನ್ನು ಸಹ ಪರಿಗಣಿಸುವುದಕ್ಕೆ ಮತ್ತು ಕಾನೂನಿನ ಪ್ರಕ್ರಿಯೆಯ ಅನುಸಾರವಾಗಿ ಅಂತಿಮ ಡಿಕ್ರಿಯನ್ನು ತೆಗೆದುಕೊಳ್ಳುವುದಕ್ಕೆ ವಿಚಾರಣಾ ನ್ಯಾಯಾಲಯಕ್ಕೆ ಕಡತವನ್ನು ಕಳುಹಿಸಿರುತ್ತಾರೆ.

2. ನಿರ್ಣಯಿಸುವುದಕ್ಕಾಗಿ ಮೊಕದ್ದಮೆಯ ಸುಸಂಗತ ವಾಸ್ತವಾಂಶಗಳು ಇಂತಿವೆ ವಿಭಜನೆಗಾಗಿ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಅನುಮತಿಸಲು ಅಪೀಲುದಾರನ ಮೂಲಕ ದಾಖಲಾದ ಅಧಿಕೃತ ದಾವೆ ಸಂಖ್ಯೆ 68/1980ರ ಅಪೀಲನ್ನು ಅನುಮತಿಸಿದೆ ಮತ್ತು ಪ್ರಾರಂಭಿಕ ಡಿಕ್ರಿಯನ್ನು ಹೊರಡಿಸಲಾಗಿದೆ. ಸದರಿ ಡಿಕ್ರಿಯೇ ಅಂತಿಮವಾದುದಾಗಿರುತ್ತದೆ, ಅಂತಿಮ ಡಿಕ್ರಿಯನ್ನು ಹೊರಡಿಸುವುದಕ್ಕೆ ಎಫ್‌ಡಿಪಿ ಸಂ.3/1996ರ ಮೂಲಕ ಕೋರಿಕೆಯನ್ನು ದಾಖಲಿಸಿದೆ. ಅದರಲ್ಲಿ ನೀಡಿದ ಡಿಕ್ರಿಯ ವಿರುದ್ಧ ಹಿರಿಯ ಸಿವಿಲ್ ನ್ಯಾಯಾಧೀಶರು, ಕುಮುಟಾ ನ್ಯಾಯಾಲಯದಲ್ಲಿ ಆರ್.ಎ. ಸಂಖ್ಯೆ 31/2010ರಲ್ಲಿ ದಾಖಲಿಸಿರುತ್ತಾರೆ. ಆರ್.ಎ ಸಂಖ್ಯೆ 31/2010ರಲ್ಲಿ ದಾಖಲಿಸಿದ ಅರ್ಜಿಯಲ್ಲಿ ಹಿಂದು ಉತ್ತರಾಧಿಕಾರ ಅಧಿನಿಯಮದ 6ನೇ ಪ್ರಕರಣಕ್ಕೆ ಆಗಿರುವ ತಿದ್ದುಪಡಿಯಂತೆ ಅದರ ಪರಿಣಾಮಕಾರಿಯ ದೃಷ್ಟಿಯಲ್ಲಿ ಸಾಕ್ಷ್ಯಾಧಾರವನ್ನು ನೀಡುವುದಕ್ಕೆ ಅನುಮತಿಯನ್ನು ನಿವೇದಿಸಿದ್ದಾರೆ. ಅಪೀಲು ನ್ಯಾಯಾಲಯವು ದಿನಾಂಕ 31.10.2011ರ ತೀರ್ಪು ಮತ್ತು ಆದೇಶದ ಮೂಲಕ ಮೊಕದ್ದಮೆಯನ್ನು ವಿಚಾರಣಾ ನ್ಯಾಯಾಲಯಕ್ಕೆ ಹಿಂದಕ್ಕೆ ಕಳುಹಿಸಿದ್ದಾರೆ. ನಿರಾಕರಿಸಿದ ಸದರಿ ತೀರ್ಪು ಮತ್ತು ಆದೇಶವನ್ನು ವಿರೋಧಿಸಿ ಸಂಕೀರ್ಣ ಎರಡನೇ ಅಪೀಲು ಸಂಖ್ಯೆ 535/2012ರನ್ನು ದಾಖಲಿಸಿರುವರು. ಸದರಿ ಅಪೀಲನ್ನು 27.01.2014ರಂದು ಪುರಸ್ಕರಿಸಲಾಗಿದೆ ಮತ್ತು ಪ್ರಶ್ನಿತ ತೀರ್ಪು/ಆದೇಶವನ್ನು ತಳ್ಳಿಹಾಕಲಾಗಿದೆ ಮತ್ತು ಕೆಳ ಅಪೀಲು ನ್ಯಾಯಾಲಯವು ಈ ವಿಷಯವನ್ನು ಪರಿಗಣಿಸುವಂತೆ ನಿರ್ದೇಶಿಸಲಾಗಿದೆ. ***ಪ್ರೇಮ –ವಿರುದ್ಧ – ನಂಜೇಗೌಡ*** [1], ಇವರ ಮೊಕದ್ದಮೆಯಲ್ಲಿ ಸ್ಪಷ್ಟವಾಗಿ ನಿರೂಪಿತವಾದ ತತ್ವಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸಂಬಂಧಪಟ್ಟ ಷೇರುಗಳನ್ನು ಆದಷ್ಟು ಬೇಗನೆ ಮಾರ್ಪಾಡು ಮಾಡಲು

1. (2011)6 ಎಸ್‌ಸಿಸಿ 462

ಪರಿಗಣಿಸುವುದಕ್ಕೆ ನಿರ್ದೇಶಿಸಿರುತ್ತದೆ. ಅಪೀಲು ನ್ಯಾಯಾಲಯ ಈ ವಿಷಯವನ್ನು 01.03.2014ರಿಂದ ಆರು ತಿಂಗಳ ಅವಧಿಯೊಳಗಾಗಿ ಈ ವಿಷಯವನ್ನು ತೀರ್ಮಾನಿಸುವುದಕ್ಕೆ ನಿರ್ದೇಶಿಸುತ್ತದೆ. ಅದು, ಸಾಕ್ಷ್ಯವನ್ನು ದಾಖಲಿಸಿದ ತರುವಾಯ ಮಾತ್ರವೇ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಸ್ಪಷ್ಟ ಪಡಿಸಿರುವುದರಿಂದ ಪಕ್ಷಕಾರರಿಗೆ ಅವರಲ್ಲಿರುವ ಹೆಚ್ಚುವರಿ ಸಾಕ್ಷ್ಯಗಳು ಯಾವುದಾದರೂ ಇದ್ದರೆ ಅಥವಾ ಸಂದರ್ಭಾನುಸಾರ ಹೊಸದಾದ ಸಾಕ್ಷ್ಯಗಳೇನಾದರೂ ಇದ್ದರೆ ಅವುಗಳನ್ನು ಒದಗಿಸುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡಲು ಸಹ ನಿರ್ದೇಶಿಸುತ್ತದೆ. ಕೆಳ ಅಪೀಲು ನ್ಯಾಯಾಲಯ ದಿನಾಂಕ 18.08.2014ರಂದು ಅಪೀಲನ್ನು ಪುರಸ್ಕರಿಸಿದೆ ಮತ್ತು ಎಫ್‌ಡಿಪಿ ಸಂಖ್ಯೆ 3/1996ರಲ್ಲಿ ದಿನಾಂಕ 19.07.2006ರಂದು ಹೊರಡಿಸಿದ ಆದೇಶವನ್ನು ತಳ್ಳಿ ಹಾಕಿದೆ ಮತ್ತು ತೀರ್ಪು ಅನ್ನು ಮತ್ತು ಆದೇಶವನ್ನು ಹೊರಡಿಸಿರುವುದರಿಂದ ಹಾಗೂ ವಿಚಾರಣಾ ನ್ಯಾಯಾಲಯಕ್ಕೆ ವಿಷಯವನ್ನು ವಾಪಸ್ಸು ಕಳುಹಿಸಿರುವುದರಿಂದ ಈ ಅಪೀಲನ್ನು ದಾಖಲಿಸಲಾಗಿದೆ.

3. ಶ್ರೀ ಜಗದೀಶ ಪಾಟೀಲ್ ಮಾನ್ಯ ವಕೀಲರು, ಕೆಳ ನ್ಯಾಯಾಲಯ ಪ್ರಶ್ನಿತ ಆದೇಶವನ್ನು ಹೊರಡಿಸುವಲ್ಲಿ, ಎಸಗಿದ ತಪ್ಪು ಮತ್ತು ಕಾನೂನು ಬಾಹಿರತೆಯ ಅಂಶಗಳ ವಾದವನ್ನು ಮಂಡಿಸಿದ್ದಾರೆ. ಅವರು, ಎಂಎಸ್‌ಎ 535/2012ರಲ್ಲಿ ಹೊರಡಿಸಿದ ದಿನಾಂಕ 27.01.2014ರ ತೀರ್ಪಿನ ದೃಷ್ಟಿಯಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ಪುನಃ ಕಳುಹಿಸುವುದು ಕೆಳ ನ್ಯಾಯಾಲಯಕ್ಕೆ ಮುಕ್ತವಾಗಿರುವುದಿಲ್ಲವೆಂದು ನಿವೇದಿಸಿದ್ದಾರೆ. ಅವರು ಕೆಳ ನ್ಯಾಯಾಲಯವು ಕರ್ತವ್ಯಚ್ಯುತಿಯನ್ನು ಎಸಗಿದೆಯೆಂದು ಮತ್ತು ಈ ನ್ಯಾಯಾಲಯದ ಹಸ್ತಕ್ಷೇಪವನ್ನು ಬಯಸಿ ವಾದವನ್ನು ಮಂಡಿಸಿರುವರು.

4. ಶ್ರೀಯುತರಾದ ಶ್ರೀ ಹರ್ಷ ಎ. ನೀಲೊಪಂತ್ ಮತ್ತು ಎಸ್.ಎನ್. ಭಟ್ ಮಾನ್ಯ ವಕೀಲರುಗಳು ಮತ್ತೊಂದು ಕಡೆಯಲ್ಲಿ ಪ್ರತ್ಯರ್ಜಿದಾರರ ಪರವಾಗಿ ಪ್ರಶ್ನಿತ ತೀರ್ಪು/ಆದೇಶವನ್ನು ಬೆಂಬಲಿಸಿ ತಮ್ಮ ವಾದವನ್ನು ಮಂಡಿಸಿರುವರು ಮತ್ತು ಈ ಅಪೀಲನ್ನು ವಜಾ ಮಾಡುವಂತೆ ಕೋರಿದ್ದಾರೆ.

5. ಪ್ರತ್ಯರ್ಜಿದಾರ ಸಂ.1 ಇವರು ಹಿರಿಯ ಸಿವಿಲ್ ನ್ಯಾಯಾಧೀಶರು, ಕುಮಟಾ ಇವರು ಆರ್.ಎ.ಸಂಖ್ಯೆ 31/2010ರಲ್ಲಿ ದಿನಾಂಕ 18.08.2014ರಂದು ಮೊಕದ್ದಮೆಯನ್ನು ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸುವುದಕ್ಕೆ ಎಫ್‌ಡಿಪಿ ಸಂಖ್ಯೆ 3/1990ರಲ್ಲಿ ಹೊರಡಿಸಿದ ಆದೇಶವನ್ನು ನಿರಾಕರಿಸಿ ಎಂಎಸ್‌ಎ 535/2012 ದಾಖಲಿಸಿರುವರು. ಕೆಳ ನ್ಯಾಯಾಲಯವು ಎಂಎಸ್‌ಎ 535/2012ಅನ್ನು ಪುರಸ್ಕರಿಸಿ, ಮೊಕದ್ದಮೆಯ ವಿಷಯವನ್ನು ಹೊಸದಾಗಿ ಪರಿಗಣಿಸುವುದಕ್ಕೆ ಮತ್ತು ನಿಗದಿಪಡಿಸಿದ ಅವಧಿಯೊಳಗಾಗಿ ತಾನೇ ಸ್ವತಃ ಈ ಮೊಕದ್ದಮೆಯನ್ನು ತೀರ್ಮಾನಿಸುವುದಕ್ಕೆ ನಿರ್ದೇಶಿಸುತ್ತದೆ. ಕೆಳ ಅಪೀಲು ನ್ಯಾಯಾಲಯ ಸದರಿ ತೀರ್ಪು ಬದ್ಧವಾಗಿದೆ ಎಂದು ಪ್ರಶ್ನಿತ ಆದೇಶವನ್ನು ಹೊರಡಿಸಿದೆ.

6. ದಿನಾಂಕ 27.01.2014ರಂದು ಎಂಎಸ್‌ಎ 535/2012ರಲ್ಲಿ ಹೊರಡಿಸಿದ ತೀರ್ಪನ್ನು ಗಮನದಲ್ಲಿಟ್ಟುಕೊಂಡು ಕೆಳ ಅಪೀಲು ನ್ಯಾಯಾಲಯ ವಿಚಾರಣಾ ನ್ಯಾಯಾಲಯಕ್ಕೆ ಮೊಕದ್ದಮೆಯ ವಿಷಯವನ್ನು ಹಿಂದುರುಗಿಸುವ ಮೂಲಕ ತನ್ನ ಹೊಣೆಗಾರಿಕೆಯನ್ನು ಕಾರ್ಯತಃ ಪರಿತ್ಯಜಿಸಿದೆ ಎಂಬುದನ್ನು ಗಮನಿಸಲಾಗಿದೆ. ಆದರೂ ಕೆಳ ಅಪೀಲು ನ್ಯಾಯಾಲಯ ನಿರ್ಣಯಿಸಿದ ಸದರಿ ಸ್ಪಷ್ಟತೆ ಮತ್ತು ಹೊರಡಿಸಿದ ನಿರ್ದೇಶನಗಳು ದೋಷಯುಕ್ತವಾದವು ಮತ್ತು ಕಾನೂನು ಸಮ್ಮತವಲ್ಲದ ಕೃತ್ಯವನ್ನು ಪುನಾರ್ವರ್ತಿಸಿದೆ. ಆದುದರಿಂದ ಸದರಿ ವಿಷಯದ ಮೊಕದ್ದಮೆಯನ್ನು ಮತ್ತೆ ಮತ್ತೆ ವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಿದೆ. ಎಂಎಸ್‌ಎ 535/2012ರಲ್ಲಿ ಹೊರಡಿಸಿದ ನಿರ್ದಿಷ್ಟ ನಿರ್ದೇಶನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ವಿಚಾರಣಾ ನ್ಯಾಯಾಲಯಕ್ಕೆ ವಿಷಯವನ್ನು ಕಳುಹಿಸುವ ಪ್ರಶ್ನಿತ ಆದೇಶವನ್ನು ಸಂಪೂರ್ಣವಾಗಿ ಅನುಮತಿಸಲು ಸಾಧ್ಯವಿಲ್ಲ. ಕೆಳನ್ಯಾಯಾಲಯವೇ ಸಂಗತಿ ಮತ್ತು ಕಾನೂನು ಎರಡರ ದೃಷ್ಟಿಯಲ್ಲಿ ಮೊದಲ ಅಪೀಲು ನ್ಯಾಯವಾಗಿದೆ ಮತ್ತು ಆದುದರಿಂದ ಕೆಳ ನ್ಯಾಯಾಲಯವೇ ನ್ಯಾಯ ಹಿತಾಸಕ್ತಿಯಲ್ಲಿ ದಾವೆಯ ಮೊಕದ್ದಮೆಯನ್ನು ಪುನರ್ ವಿಚಾರಣೆಗಾಗಿ ಹಿಂದಕ್ಕೆ ಕಳುಹಿಸುವುದು ನ್ಯಾಯ ತೀರ್ಮಾನದ ವಿಳಂಬಕ್ಕೆ ಕಾರಣವಾಗಿರುತ್ತದೆ. ಎಂದರೆ ಹಿಂದಕ್ಕೆ ಕಳುಹಿಸುವುದು ಅನಗತ್ಯ ವೆಚ್ಚವಾಗಿದೆ ಮತ್ತು ಅದಕ್ಕಾಗಿ ಸಾಕಷ್ಟು ಕಾಲವು ವ್ಯಯವಾಗುತ್ತದೆ.

ಬದುಕಿನ ಜೀವಾವಧಿಯನ್ನು ಮೊಕದ್ದಮೆಗಳಲ್ಲಿಯೇ ಕಳೆಯುವುದು ಉಚಿತವಾದುದಲ್ಲ. ಆದುದರಿಂದ ಹಿಂದಕ್ಕೆ ಕಳುಹಿಸುವಂತಹ ವಾರೆಂಟು ನೀಡದಿರುವುದರಿಂದ ಈ ವಿಳಂಬತೆಯನ್ನು ತಪ್ಪಿಸಬೇಕು. ಕೆಳ ನ್ಯಾಯಾಲಯ ನ್ಯೂನತಾ ಕಾರ್ಯ ವಿಧಾನವನ್ನು ಅನ್ವಯಿಸಿಕೊಂಡಿದೆ ಮತ್ತು ತನ್ನ ಕರ್ತವ್ಯವನ್ನು ತ್ಯಜಿಸಿದೆ.

ಇದರ ಪರಿಣಾಮವಾಗಿ, ಅಪೀಲನ್ನು ಪುರಸ್ಕರಿಸಿದೆ ಮತ್ತು ಆಕ್ಷೇಪಿತ ತೀರ್ಪನ್ನು ತಳ್ಳಿ ಹಾಕಲಾಗಿದೆ. 13.06.2016ರಂದು ಹಿರಿಯ ನ್ಯಾಯಾಧೀಶರು ಕುಮಟಾ ನ್ಯಾಯಾಲಯದಲ್ಲಿ ಪಕ್ಷಕಾರರು ಹಾಜರಾಗುವುದಕ್ಕೆ ಮತ್ತು ಮುಂದಿನ ಆದೇಶಗಳನ್ನು ಪಡೆದುಕೊಳ್ಳಲು ನಿರ್ದೇಶಿಸಿರುತ್ತದೆ. ಎಂಎಸ್ಎ ಸಂಖ್ಯೆ 535/ 2012ರಲ್ಲಿ ದಿನಾಂಕ 27.1.2014ರಂದು ಹೊರಡಿಸಿದ ತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಳ ನ್ಯಾಯಾಲಯ ಕಾನೂನಿಗನುಸಾರವಾಗಿ ಶೀಘ್ರವಾಗಿ ಮತ್ತು 31.08.2016ಕ್ಕಿಂತ ಮುಂಚಿತವಾಗಿ ಆರ್ಎ ಸಂಖ್ಯೆ 31/2010ಅನ್ನು ನಿರ್ಣಯಿಸುವುದಕ್ಕೆ ನಿರ್ದೇಶಿಸಿರುತ್ತದೆ.